# ಹರಿಕುಣಿದಾ ನಮ್ಮ ಹರಿ ಕುಣಿದ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 20
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 584
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 164
4. **Note:** Lyrics given here are as per Ref. 1. The wordings in Ref. 2 and Ref. 3 are almost similar to Ref. 1. Few variations as per Ref. 2 & 3 are given in yellow highlights.
5. **Note:** Singer has followed the wordings as in Ref. 2.

ರಾಗ : ಬೇಹಾಗ್ ತಾಳ : ಆದಿ

ಹರಿ ಕುಣಿದ ನಮ್ಮ ಹರಿ ಕುಣಿದ || ಪ ||

ಅಕಳಂಕ ಚರಿತ ಮಕರ ಕುಂಡಲಧರ
ಸಕಲರ ಪಾಲಿಪ ಹರಿ ಕುಣಿದ || ೧ ||

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ
ತರಳೆಯರೊಡಗೂಡಿ ಹರಿ ಕುಣಿದ || ೨ ||

(ಅಂದುಗೆ ಪಾಡುಗ ಬಿಂದುಲಿ ಬಾಪುರಿ) (ಅಂದುಗೆ ಅರಳೆಲೆ ಬಿಂದುಲ್ಲಿ ಬಾಪುರಿ)
ಚೆಂದದಿ ನಲಿಯುತ ಹರಿ ಕುಣಿದ || ೩ ||

ಉಟ್ಟ ಪಟ್ಟೆಯ ದಟ್ಟಿ ಇಟ್ಟ ಕಾಂಚಿಯ ಧಾಮ
ದಿಟ್ಟ ಮಲ್ಲರ ಗಂಡ ಹರಿ ಕುಣಿದ || ೪ ||

ಪರಮ ಭಾಗವತರ (ಪುರದೊಳಗಾಡುವ) (ಕೇರಿಯೊಳಾಡುವ)
ಪುರಂದರ ವಿಠಲ ಹರಿ ಕುಣಿದ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನು ಕುಣಿದ ರೀತಿಯನ್ನು ಈ ಹಾಡಿನಲ್ಲಿ ಹೇಳಲಾಗಿದೆ.

**ಅರಳೆಲೆ** – ಸಣ್ಣ ಮಕ್ಕಳ ಹಣೆಯ ಮೇಲೆ ತೊಡಿಸುವ ಆಭರಣ. ಅರಳಿ ಎಲೆಯ ಆಕಾರದ್ದು.

**ಮಾಗಾಯಿ** – ಕಿವಿಗೆ ತೊಡುವ ಓಲೆ, ಮಾವಿನಕಾಯಿಯ ಆಕಾರದ್ದು.

**ಅಂದುಗೆ** – ಕಾಲಬಳೆ.

**ಪಾಡಗ** – ಕಾಲಲ್ಲಿ ತೊಡುಗ ಕಡಗ (ಪಾದಕಟಕ).

**ಬಿಂದಲಿ** – ಬಿಂದುಲಿ; ಸಣ್ಣ ಗೆಜ್ಜೆ.

**ಬಾಪುರಿ** – ತೋಳಬಳೆ.

**ಪಟ್ಟೆಯ ದಟ್ಟಿ** – ಸೊಂಟಕ್ಕೆ ಸುತ್ತಿದ ರೇಷ್ಮೆಯ ವಸ್ತ್ರ.

**ಕಾಂಚಿಯ ದಾಮ** – ಉಡಿದಾರ.

**ಭಾಗವತ ಪುರ** = ಗೋಕುಲ

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** Krishna, abharana, bhagavatha, keri, ADu,
**Pravachana:** NA
**Explanation:** NA